ಅಧ್ಯಕ್ಷರು : ಪ್ರಸ್ತಾವವನ್ನು ಸೂಚಿಸಲಾಯಿತು. ಈಗ ಶೂನ್ಯ ವೇಳೆಯನ್ನು ತೆಗೆದುಕೊಳ್ಳೋಣ.

6. ಸಭಾಧ್ಯಕ್ಷರ ಆದೇಶದ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

i) ವಿಷಯ : ಬೆಳಗಾವಿಯಲ್ಲಿ ಕೆ.ಎ.ಟಿ. ಪೀಠವನ್ನು ಸ್ಥಾಪನೆ ಮಾಡುವ ಬಗ್ಗೆ

ಶ್ರೀ ಪಿ.ಎಂ. ಅಶೋಕ : ಮಾನ್ಯ ಅಧ್ಯಕ್ಷರೆ, ಇದು ಬಹಳ ಮುಖ್ಯವಾದ ವಿಚಾರ. ಧಾರವಾಡದಲ್ಲಿ High Court ಮಾಡಿದ್ದೀರಿ. ಬೆಳಗಾವಿ ಡಿವಿಷನ್‌ನಲ್ಲಿ ಕೆ.ಎ.ಟಿ. ಮಾಡಬೇಕೆಂದು ಹೇಳಿ ವಕೀಲರುಗಳೆಲ್ಲಾ ಬೆಳಿಗ್ಗೆಯಿಂದ ಎಲ್ಲಾ ಶಾಸಕರ ಮನೆಗಳ ಮನೆ ಮುಂದೆ ಸತ್ಯಾಗ್ರಹ ಕುಳಿತಿದ್ದಾರೆ. ಮಾನ್ಯ ಕಾನೂನು ಸಚಿವರು ಕಳೆದ ಸಾರಿ ಬೆಳಗಾವಿಗೆ ಬಂದಾಗ ಭರವಸೆಯೊಂದನ್ನು ನೀಡಿದ್ದರು. ಆದಕಾರಣ ಬೆಳಗಾಂ ಜಿಲ್ಲೆಯಲ್ಲಿ ಕೆ.ಎ.ಟಿ. ಮಾಡುತ್ತೇನೆಂದು ಹೇಳಿ Law Minister clarification ನೀಡಿದರೆ ಎಲ್ಲರೂ strike ಅನ್ನು withdraw ಮಾಡುತ್ತಾರೆ.

ಅಧ್ಯಕ್ಷರು : ಹೇಳಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ನಿನ್ನೆ ವಿಧಾನ ಪರಿಷತ್‌ನಲ್ಲಿ ಮಾನ್ಯ ಸದಸ್ಯರಿಬ್ಬರು ಪ್ರಶ್ನೆಯನ್ನು ಕೇಳಿದ್ದಾರೆ. ಆಡಳಿತಕ್ಕೆ ಸಂಬಂಧಿಸಿದಂತೆ ಕೆ.ಎ.ಟಿ. ಯನ್ನು ಉತ್ತರ ಕರ್ನಾಟಕದ ಬೆಳಗಾವಿಯಲ್ಲಿ ಸ್ಥಾಪನೆ ಮಾಡಿದರೆ ಹೇಗೆ ಎಂದು ಮಾನ್ಯ ಮುಖ್ಯಮಂತ್ರಿಯವರಿಗೆ ಒಂದು ಪ್ರಶ್ನೆಯನ್ನು ಕಳುಹಿಸಿಕೊಟ್ಟಿದ್ದು, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳ ಭರವಸೆಯನ್ನು ನೀಡಿದ್ದಾರೆ. ಮುಂದಿನ ದಿನಮಾನಗಳಲ್ಲಿ ಬೆಳಗಾವಿಯಲ್ಲಿ ಕೆ.ಎ.ಟಿ.ಯೊಂದನ್ನು ಪ್ರಾರಂಭ ಮಾಡುತ್ತೇವೆಂಬ ಹೇಳಿಕೆಯನ್ನು ನೀಡಿದರು. ಕೆ.ಎ.ಟಿ. ಬರುತ್ತದೆಂಬ ಕಾರಣದಿಂದ ಬೆಳಗಾವಿ ಜಿಲ್ಲೆ ಪೂರ್ತಿ ಸಂತೋಷಗೊಂಡಿತು. ತದನಂತರ ಮತ್ತೊಬ್ಬ ಶಾಸಕರು ಮಾನ್ಯ ಕಾನೂನು ಸಚಿವರನ್ನು ಕೆ.ಎ.ಟಿ.ಯನ್ನು ಎಲ್ಲಿ ಪ್ರಾರಂಭ ಮಾಡುತ್ತೀರಿ ಎಂದು ಪ್ರಶ್ನೆ ಕೇಳಿದಾಗ, ಅದಕ್ಕೆ ಅವರು ಬಾಯ್‌ತಪ್ಪಿ ಹೇಳಿದರೂ ಅಥವಾ ಖುಷಿಪಡಿಸುವುದಕ್ಕಾಗಿಯೋ, ಅಚಾತುರ್ಯದಿಂದಲೂ ಹೇಳಿದರೋ ಗೊತ್ತಿಲ್ಲ. ಯಾವ ರೀತಿಯಿಂದ ಆಗಿದೆಯೋ ತಿಳಿದಿಲ್ಲ. ನಿಮ್ಮ ಬಾಯಿ

ಯಿಂದ ಹೋಗಿರುವ ತಪ್ಪು ಶಬ್ದದಿಂದ ವ್ಯತಿರಿಕ್ತ ಪರಿಣಾಮಕ ಉಂಟಾಗಿದೆ. ನೀವು ಧಾರವಾಡದಲ್ಲಿ ಮಾಡುತ್ತೇನೆಂದು ಹೇಳಿದ್ದೀರಿ. ಇದರ ವ್ಯತಿರಿಕ್ತ ಪರಿಣಾಮ ಏನಾಗಿದೆಯೆಂದರೆ ಇಡೀ ಬೆಳಗಾವಿ ಜಿಲ್ಲೆಯ 18 ಶಾಸಕರ ಮನೆಯ ಮುಂದೆ ಅಲ್ಲಿರತಕ್ಕಂತಹ ಎಲ್ಲಾ ವಕೀಲರುಗಳು ಆಯಾ ಶಾಸಕರುಗಳ ಮನೆಯ ಮುಂದೆ ಧರಣಿಯನ್ನು ಪ್ರಾರಂಭ ಮಾಡಿದ್ದಾರೆ. ಮಾನ್ಯ ಸಚಿವರಾದ ಸತೀಶ್ ಜಾರಕಿಹೊಳಿ ಅವರು ಬಹಳ ಪ್ರಭಾವಿಗಳಾಗಿದ್ದು, ಅವರ ಮನೆಯ ಮುಂದೆ ಹೆದರಿ ಧರಣಿ ಕುಳಿತುಕೊಳ್ಳುವುದಿಲ್ಲವೆಂದು ತಿಳಿದುಕೊಂಡಿದ್ದೆ. ಆದರೆ ಅವರ ಮನೆಯ ಮುಂದೆ ಧರಣಿ ಕುಳಿತು ಅವರ ಮನೆಯೊಳಗಿನ ಒಬ್ಬ ವ್ಯಕ್ತಿಯನ್ನು ಸಹ ಹೊರಗೂ ಮತ್ತು ಒಳಗೂ ಬಿಟ್ಟಿರುವುದಿಲ್ಲ. ಪ್ರಭಾವಿ ಮಂತ್ರಿಯನ್ನು ಸಹ ಬಂಧನದಲ್ಲಿಟ್ಟು ಅವರ ಮನೆ ಮುಂದೆ ಧರಣಿ ಕುಳಿತುಕೊಂಡಿದ್ದಾರೆ. ನಾವೆಲ್ಲರೂ ಸಾಮಾನ್ಯರಿದ್ದೇವೆ, ಯಾರೋ ಕುಳಿತುಕೊಳ್ಳುತ್ತಾರೆ, ಹೋಗುತ್ತಾರೆನ್ನುವ ಮಾತು ಬೇರೆ. ದಯಮಾಡಿ ನಿಮ್ಮಲ್ಲಿ ನನ್ನ ಕಳಕಳಿಯೇನೆಂದರೆ ನೀವು ನೀಡಿರುವ statement ವಾಪಸ್ಸು ಪಡೆದುಕೊಂಡು, ಮಾನ್ಯ ಮುಖ್ಯಮಂತ್ರಿಯವರು ಹೇಳಿರುವ statement ಗೆ ಬದ್ಧವಾಗಿ ಬೆಳಗಾವಿಯಲ್ಲಿ ಕೆ.ಎ.ಟಿ. ಸ್ಥಾಪನೆ ಮಾಡುತ್ತೇವೆಂದು ಹೇಳಿದರೆ ಎಲ್ಲಾ ವಕೀಲರು ತಮ್ಮ ಪ್ರತಿಭಟನೆಯನ್ನು ಹಿಂತೆಗೆದುಕೊಳ್ಳಬಹುದು. ಬೆಳಗಾವಿ ಜಿಲ್ಲೆಗೆ ತನ್ನದೇ ಆದ ಒಂದು ಇತಿಹಾಸವಿದೆ. ಸ್ವಾತಂತ್ರ್ಯ ಪೂರ್ವದಿಂದಲೂ ಸಹ ಇಲ್ಲಿ ಒಂದು Regional Commissioner Office ಇದೆ. ನೀವೆಲ್ಲರೂ ಸೇರಿ ಬೆಳಗಾವಿಯನ್ನು ಎರಡನೇ ರಾಜಧಾನಿಯನ್ನಾಗಿ ಮಾಡಬೇಕೆಂದು ಹೊರಟಿದ್ದೀರಿ. ಕೆ.ಎ.ಟಿ. ಸ್ಥಾಪನೆ ಮಾಡುವ ವಿಷಯದಲ್ಲಿ ಏಕೆ ತಪ್ಪು ಮಾತನಾಡಿದಿರೋ ಗೊತ್ತಿಲ್ಲ. ಕೆಲಸದ ಅವಸರದಲ್ಲಿಯೋ ಮತ್ಯಾವುದೋ ವಿಚಾರಕ್ಕೆ ಹೇಳಿರಬಹುದು. ಅದಕ್ಕೆ ನಾವು ತಪ್ಪು ಹೇಳುತ್ತಿಲ್ಲ. ಆದಕಾರಣ ತಾವು ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಗೆ ನಾವು ಬದ್ಧರಿದ್ದೇವೆಂದು ದಯಮಾಡಿ ಒಂದು statement ಮಾಡಿ, ಬೆಳಗಾವಿಯಲ್ಲಿ ಪ್ರಾರಂಭ ಮಾಡುತ್ತೇವೆಂದು ಹೇಳಬೇಕಾಗಿ ತಮ್ಮಿಂದ ಆಪೇಕ್ಷೆಪಡುತ್ತಾ ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ಸಮಸ್ಯೆಯ ಸಂಬಂಧವಾಗಿ ಉತ್ತರ ಕರ್ನಾಟಕದ ಬೆಳಗಾವಿಯಲ್ಲೂ ಮಾಡಲಿ, ಗುಲ್ಬರ್ಗಾಕ್ಕೂ ಒಂದು ಮಾಡಲಿ. ಏಕೆಂದರೆ ಹೈಕೋರ್ಟನ್ನು ಗುಲ್ಬರ್ಗಾ ಮತ್ತು ಧಾರವಾಡದ ಎರಡೂ ಕಡೆಗಳಲ್ಲಿ ಎರಡು ಪೀಠಗಳನ್ನು ಮಾಡಿದ್ದಾರೆ. ಹಾಗೆಯೇ ಕೆ.ಎ.ಟಿ.ಯನ್ನು ಕೂಡ ಮಾಡಲಿ.

ಶ್ರೀ ಅಪ್ಪಾಜಿ ನಾಡಗೌಡ : ಮಾನ್ಯ ಅಧ್ಯಕ್ಷರೆ, ಈ ರೀತಿ K.A.T Tribunal ಗಳು, ಕೋರ್ಟ್‌ಗಳು, ಎಲ್ಲಿ ಪ್ರಾರಂಭ ಆಗಬೇಕೋ ಅಲ್ಲಿ ರಾಜಕೀಯ ಒತ್ತಡ ಇರುವುದಾದರೆ, ನಾವು ಬಿಜಾಪುರಕ್ಕೂ ರಾಜಕೀಯ ಒತ್ತಡ ಹಾಕಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು ಯಾವ context ಮೇಲೆ ಹೇಳಿದ್ದಾರೋ ನಮಗೆ ಗೊತ್ತಿಲ್ಲ. ಆದರೆ ನಮಗೆಲ್ಲರಿಗೂ ಅನುಕೂಲವಾಗುವ ರೀತಿಯಲ್ಲಿ ಸ್ಥಾಪನೆ ಮಾಡಲಿ ಎಂದು ಒತ್ತಾಯ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶು ಸಂಗೋಪನೆ ಸಚಿವರು : ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಮೇಲ್ಮನೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರ ಕೊಡುವ ಸಂದರ್ಭದಲ್ಲಿ ಕೆ.ಎ.ಟಿ.ಯನ್ನು ಧಾರವಾಡಕ್ಕೆ ಕೊಡುವುದರ ಬಗ್ಗೆ ಪರಿಶೀಲನೆ ಮಾಡುತ್ತೇನೆ ಎಂದು ಹೇಳಿರುತ್ತೇನೆ. ನಮ್ಮ ರಾಜ್ಯದಲ್ಲಿ ಸುಮಾರು 24,000 ಕೇಸ್‌ಗಳಿವೆ. ಬೆಂಗಳೂರಿನಲ್ಲಿ ಮೂರು K.A.T. Benches ಇವೆ. ಅಲ್ಲಿಯೂ ಬೆಂಚ್‌ಗಳಲ್ಲಿ ಪೂರ್ತಿ constitute ಆಗಿಲ್ಲ, vacancies ಕೂಡ ಖಾಲಿಯಿದ್ದು, ಅದನ್ನು ತ್ವರಿತ ಗತಿಯಲ್ಲಿ fill up ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಅದೇ ರೀತಿಯಲ್ಲಿ ರಾಜ್ಯದಾದ್ಯಂತ 24,000 ಕೇಸ್‌ಗಳಲ್ಲಿದ್ದು, ಧಾರವಾಡ ಮತ್ತು ಗುಲ್ಬರ್ಗಾದಲ್ಲಿ ಹೈಕೋರ್ಟ್ ಸ್ಥಾಪನೆಯಾಗಿರುವ ಕಾರಣದಿಂದ ಅಲ್ಲಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಮತ್ತು ಇಲ್ಲಿ ಮೂಲಭೂತ ಸೌಕರ್ಯಗಳು ಮತ್ತು ಎಲ್ಲಾ ರೀತಿಯ ಸೌಕರ್ಯಗಳು ಕೂಡ ಇರುವುದರಿಂದ ಪೀಠವನ್ನು ಸ್ಥಾಪನೆ ಮಾಡಲು ಯಾವುದೇ ತೊಂದರೆಯಿಲ್ಲ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇವೆ. ಹಾಗೆಂದು ಬೆಳಗಾವಿ ಆದ್ಯತೆ ನೀಡುತ್ತಿಲ್ಲವೆಂದಲ್ಲ. ಅದೇ ರೀತಿಯಾಗಿ ಧಾರವಾಡದಲ್ಲಿ

ತಿಂಗಳಾನುಗಟ್ಟಲೆ strike ಕುಳಿತುಕೊಂಡಿದ್ದಾರೆ. ಆ ಸಂದರ್ಭದಲ್ಲಿ ಪರಿಶೀಲನೆ ಮಾಡುತ್ತೇನೆ ಎನ್ನುವ ಮಾತನ್ನು ಹೇಳಿದ್ದೆ. ನಿನ್ನೆಯ ದಿವಸ ಮೇಲ್ಮನೆಯ ಲ್ಲಿಯೂ ಸಹ ಈ ಮಾತನ್ನು ಹೇಳಿದ್ದೇನೆ. ಅಂತಿಮವಾಗಿ ನಿರ್ಣಯ ಕೈಗೊಳ್ಳುವ ಸಲುವಾಗಿ ನಾಳೆಯ ದಿವಸ ಮೂರು ಗಂಟೆಗೆ ಸಭೆಯನ್ನು ಕೂಡ ಕರೆದಿದ್ದು, ನಮ್ಮಲ್ಲಿರುವ ಕೇಸ್‌ಗಳಿಗೆ ಎಷ್ಟು ಬೆಂಚ್‌ಗಳನ್ನು constitute ಮಾಡುವುದಕ್ಕೆ ಸಾಧ್ಯವಿದೆ ಮತ್ತು ಅದರ ಸಾಧಕ ಬಾಧಕಗಳ ಬಗ್ಗೆ ಚರ್ಚೆ ಸಲು ಮತ್ತು ಸಂಬಂಧಿಸಿದ ಎಲ್ಲಾ ಇಲಾಖೆಯ ಕಾರ್ಯದರ್ಶಿಗಳ ಸಭೆ ಯನ್ನೂ ಕೂಡ ಕರೆದಿದ್ದೇನೆ. ನಾಳೆ ಮಧ್ಯಾಹ್ನ ಮುರು ಗಂಟೆಗೆ ಧಾರವಾಡ, ಬೆಳಗಾಂ ಮತ್ತು ಗುಲ್ಬರ್ಗಾಕ್ಕೆ ಬೇಡಿಕೆಯಿರುವುದನ್ನು ನಾವು ಕುಳಿತು ಸಮಗ್ರ ವಾಗಿ ಚರ್ಚಿಸಿ ಯೋಚನೆ ಮಾಡಿದ ನಂತರ ಸರ್ಕಾರದ ನಿರ್ಧಾರ ಏನು ಎಂಬುದನ್ನು ಮಾನ್ಯ ಮುಖ್ಯಮಂತ್ರಿಯವರ ಜೊತೆ ಸಮಾಲೋಚನೆ ಮಾಡಿ ನಂತರ ಉತ್ತರವನ್ನು ಸಭೆಯ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು : ಸಾಕು. ಈಗ ಗಮನ ಸೆಳೆಯುವ ಸೂಚನೆಗಳು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಚರ್ಚೆ ಮಾಡಿಯೇ ಮಾಡಬೇಕಾಗುತ್ತದೆ. ಇಲ್ಲಿ ಹಣಕಾಸಿನ ಪ್ರಶ್ನೆಯಿದೆ. ದಯಮಾಡಿ ನಾನು ಮನವಿ ಮಾಡಿಕೊಳ್ಳುವು ದೇನೆಂದರೆ ಧಾರವಾಡ, ಗುಲ್ಬರ್ಗಾ, ಬೆಳಗಾಂನವರು strike ಮಾಡುವುದು ಸರಿಯಿಲ್ಲ. strike ಮಾಡುವುದು ಬೇಡ. ಹಣಕಾಸಿನ ಲಭ್ಯವಿದ್ದರೆ ಮೂರು ಕಡೆಯೂ ಮಾಡಬೇಕಾಗುತ್ತದೆ, ಅವಶ್ಯವಿದ್ದರೆ ಇನ್ನೂ ಜಾಸ್ತಿ ಕಡೆಯೂ ಮಾಡಬೇಕಾಗುತ್ತದೆ ಎನ್ನುವುದು ನನಗೆ ಗೊತ್ತಿದೆ. 24,000 ಕೇಸ್‌ಗಳನ್ನು dispose ಮಾಡಬೇಕಾದರೆ ಹೆಚ್ಚು ಬೆಂಚ್‌ಗಳನ್ನು ಮಾಡಬೇಕಾದುದು ಸರ್ಕಾ ರದ ಇಚ್ಛೆಯಾಗಿದೆ. ನಾಳೆ ಅಂತಿಮವಾಗಿ ಒಂದು ನಿರ್ಣಯವನ್ನು ಮಾಡುವು ದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ನಾವು ಬೇರೆ ಕಡೆ ಮಾಡಬೇಡಿ ಎಂದು ಹೇಳುವ ಜನರಲ್ಲ. ನಮ್ಮ demand ಏನೆಂದರೆ ಬೆಳಗಾಂ ಜಿಲ್ಲೆಗೆ

ತನ್ನದೇ ಆದ ಇತಿಹಾಸ ಇದೆ, ಸ್ವಾತಂತ್ರ್ಯ ಪೂರ್ವದಿಂದಲೂ Regional Office ಇದೆ, ಇದರ ಜೊತೆಗೆ ನೀವೆಲ್ಲರೂ ಬಂದು ಹೋಗುವುದಕ್ಕೆ ಹವಾಮಾನ ಕೂಡ ಬಹಳ ಚೆನ್ನಾಗಿ ಇದೆ.

ಅಧ್ಯಕ್ಷರು : ನಾಳೆ ಮೀಟಿಂಗ್ ಮಾಡುತ್ತಾರೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಮೀಟಿಂಗ್ ಮಾಡುವುದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಮೀಟಿಂಗ್ ಮಾಡುವ ಸಂದರ್ಭದಲ್ಲಿ ಬೆಳಗಾಂ ಜಿಲ್ಲೆಗೆ ಪ್ರಥಮ ಆದ್ಯತೆ ಕೊಡುವುದನ್ನು ನೆನೆಪಿನಲ್ಲಿಟ್ಟುಕೊಳ್ಳಬೇಕು.

ಅಧ್ಯಕ್ಷರು : ಕೆ.ಶಿವಮೂರ್ತಿ, ನಿಮ್ಮದು ಕೇಳ್ರಿ.

(ಮಾನ್ಯ ಸದಸ್ಯರು ಹಾಜರಿರಲಿಲ್ಲ.)

ii) ವಿಷಯ: Meter Reading ಮಾಡುವವರ service ಬಗ್ಗೆ

ಶ್ರೀ ಕೆ.ಆರ್.ರಮೇಶ್‌ಕುಮಾರ್(ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೆ, Meter Reading ಮಾಡುವವರ services ಬಗ್ಗೆ ಶೂನ್ಯವೇಳೆಯಲ್ಲಿ ಮಾನ್ಯ ಸಚಿವರ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ.

ಶ್ರೀ ಡಿ.ಕೆ.ಶಿವಕುಮಾರ್(ಇಂಧನ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ರಮೇಶ್ ಕುಮಾರ್ ರವರು ಶೂನ್ಯವೇಳೆಯಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. 2003 ರಂದು ರಾಜ್ಯದ ಎಲ್ಲಾ ವಿದ್ಯುತ್ ಸಂಸ್ಥೆಗಳಿಗೆ ಗ್ರಾಮ ಪಂಚಾಯಿತಿ ಒಂದರಂತೆ ಸುಮಾರು 3,982 ಮಂದಿ ಅದರಲ್ಲಿ ಕೋಲಾರ ಜಿಲ್ಲೆಯಲ್ಲಿ ಸುಮಾರು 120 ಮಂದಿ. . . ಹೋಬಳಿ ಕೇಂದ್ರದ ಗ್ರಾಮೀಣ ಪ್ರದೇಶದಲ್ಲಿ ವಿದ್ಯುತ್ bill reading ಮಾಡುವುದು. ಇದಕ್ಕೆ ಸಂಬಂಧಪಟ್ಟಂತೆ ಗ್ರಾಮೀಣ ಪ್ರದೇಶದಲ್ಲಿ ಕಂದಾಯ ವಸೂಲಾತಿ ಜೊತೆಯಲ್ಲಿ meter reading ಮಾಡುವುದು. ಇದಕ್ಕೆ ಸಂಬಂಧಪಟ್ಟಂತೆ ಗ್ರಾಮೀಣ ಪ್ರದೇಶದಲ್ಲಿ ಕಂದಾಯ ವಸೂಲಾತಿ ಜೊತೆಯಲ್ಲಿ meter reader ನ ಬಿಲ್ ಅನ್ನು ಹಂಚುವುದು, ಗ್ರಾಹಕರ ಸಣ್ಣಪುಟ್ಟ ವಿದ್ಯುತ್ ಸಂಬಂಧಿಸಿದ ದೂರುಗಳನ್ನು ದಾಖಲಿಸುವುದು. ಸಹಕರಿಸುವ ಸಲುವಾಗಿ ಗ್ರಾಮ ಪಂಚಾಯಿತಿ